ಅಧ್ಯಕ್ಷರು : ಇನ್ನು ಉಳಿದ ಎರಡು ವಿಧೇಯಕವನ್ನು ಸಂಜೆ 5 ಗಂಟೆಗೆ ಚರ್ಚೆಗೆ ತೆಗೆದುಕೊಳ್ಳುತ್ತೇನೆ.

5) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

1) ವಿಷಯ : ರಾಮದುರ್ಗ ತಾಲ್ಲೂಕಿನಲ್ಲಿ ದಿನಾಂಕ: 16-02-2010 ರಂದು ನಡೆದ APMC ಯ ಒಂದು ಕಾರ್ಯಕ್ರಮದಲ್ಲಿ ಶಿಷ್ಟಾಚಾರ ಉಲ್ಲಂಘನೆಯಾಗಿರುವ ಬಗ್ಗೆ.

ಶ್ರೀ ಪಿ.ಎಂ. ಅಶೋಕ (ರಾಮದುರ್ಗ) : ಮಾನ್ಯ ಅಧ್ಯಕ್ಷರೆ, ನಮ್ಮ ರಾಮದುರ್ಗ ತಾಲ್ಲೂಕಿನಲ್ಲಿ ದಿನಾಂಕ:16.02.2010 ರಂದು APMCಯ ಒಂದು ಕಾರ್ಯಕ್ರಮ ನಡೆಯಿತು. ಆ ಕಾರ್ಯಕ್ರಮಕ್ಕೆ ಶಿಷ್ಟಾಚಾರದ ಪ್ರಕಾರ ಶಾಸಕರೇ ಅಧ್ಯಕ್ಷರಾಗಿರಬೇಕೆಂಬ ವಿಚಾರ ತಮಗೆಲ್ಲರಿಗೂ ಗೊತ್ತಿರಬೇಕು. ಈ ಬಗ್ಗೆ ಒಂದು ಕಾನೂನು ಕೂಡ ಇದೆ. ಆದರೆ ಅಲ್ಲಿ APMC Chairman ಅವರನ್ನು ಕಾರ್ಯಕ್ರಮದ ಆಧ್ಯಕ್ಷರನ್ನಾಗಿ ಮಾಡಿದ್ದಾರೆ. ನನಗೆ 'ಶಿಲಾನ್ಯಾಸದ ಕಾರ್ಯಕ್ರಮವೆಂದು' ಹಾಕಿದ್ದಾರೆ, ಮತ್ತೆ ತಾಲ್ಲೂಕು ಪಂಚಾಯತ್‌ನ ಬಿ.ಜೆ.ಪಿ. ಅಧ್ಯಕ್ಷರನ್ನು ಕೂಡ ಈ ಕಾರ್ಯಕ್ರಮದಲ್ಲಿ ಹಾಕಿಕೊಂಡಿದ್ದಾರೆ. ನಾನು ಈ ವಿಚಾರವನ್ನು ಮಾನ್ಯ ಮಂತ್ರಿಯವರ ಗಮನಕ್ಕೂ ತಂದಿದ್ದೇನೆ, ಸಂಬಂಧಪಟ್ಟವರ ಗಮನಕ್ಕೂ ತಂದಿದ್ದೇನೆ, ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಯವರನ್ನು personal ಆಗಿ meet ಮಾಡಿ ಈ ಬಗ್ಗೆ objection letter ಅನ್ನು ಕೊಟ್ಟೆ. ಅವರು ಇದನ್ನು ಸರಿಪಡಿಸುತ್ತೇನೆಂದು ಹೇಳಿದರು. ಈ ಬಗ್ಗೆ ಜಿಲ್ಲಾಧಿಕಾರಿಯವರಿಗೂ personal ಆಗಿ phone ಮಾಡಿ ಹೇಳಿದ್ದೇನೆ, ಅವರು ಕೂಡ ಸರಿಪಡಿಸುತ್ತೇನೆಂದು ಹೇಳಿದರು. ನಮ್ಮ APMC ಮಂತ್ರಿಗಳಾದ ಶ್ರೀ ಶಿವರಾಜ ತಂಗಡಗಿಯವರು ಕೂಡ ಇದನ್ನು ಸರಿಪಡಿಸುತ್ತೇನೆಂಬ ಮಾತನ್ನು ಹೇಳಿದರು. ನಾನು ಅವರಿಗೆ ಈ ವಿಷಯವನ್ನು ಹಕ್ಕುಚ್ಯುತಿಗೆ ತರುತ್ತಿದ್ದೇನೆಂದು ಹೇಳಿ, ಆ ಸಮಯದಲ್ಲಿ ಸದನದಲ್ಲಿರಬೇಕೆಂದು request ಮಾಡಿಕೊಂಡೆ. ಅದಕ್ಕೆ ಅವರು change ಮಾಡಿಸಿ, ನಿಮ್ಮನ್ನು ಅಧ್ಯಕ್ಷತೆಗೆ ಹಾಕಿಸಿದ್ದೇನೆಂದು ಹೇಳಿದರು. ಆದರೆ ಮಾಜಿ ಶಾಸಕರನ್ನು ಮಾತ್ರ ಹಾಕಿದ್ದೇವೆ, ಮಾಜಿ ಶಾಸಕರನ್ನು ಹಾಕುವುದಕ್ಕೆ

D.C.ಯವರೆ ಹೇಳಿದ್ದಾರೆಂದು ನನಗೆ ವೈಯುಕ್ತಿಕವಾಗಿ ಹೊರಗಡೆ ಸಿಕ್ಕಾಗ ಹೇಳಿದರು. ಮಾಜಿ ಶಾಸಕರು ಶ್ರೀ ಧರ್ಮಸಿಂಗ್‌ರವರು Chief Minister ಆಗಿದ್ದಾಗ ಶಾಸಕರು ಆಗಿದ್ದರು. ಆಗ ನನಗೆ ಮುಖ್ಯ ಅಧ್ಯಕ್ಷತೆಗೆ ಹಾಕಿದ್ದಕ್ಕೋಸ್ಕರ ಅವರ objection ಇದೆ. ಆಗ ಅವರು ಅದನ್ನು ಸಭೆಯಲ್ಲಿ raise ಮಾಡಿದ್ದರು. ಆಗ ಬೆಳಗಾಂವ್ ಜಿಲ್ಲೆಯ ಜಿಲ್ಲಾಧಿಕಾರಿಯಾಗಿದ್ದ ಶ್ರೀಮತಿ ಶಾಲಿನಿ ರಜನೀಶ್‌ರವರು ಕೂಡ only elected representatives of any party and according to protocol strictly others should not be invited ಎಂದು clear ಆಗಿ ಒಂದು direction ಅನ್ನು ಕೊಟ್ಟಿದ್ದಾರೆ. ಆದರೂ ಕೂಡ ಮಾಜಿ ಶಾಸಕರನ್ನು ಹಾಕಿಕೊಂಡು, ಬಿ.ಜೆ.ಪಿ. ಅಧ್ಯಕ್ಷರನ್ನು ಹಾಕಿಕೊಂಡು ರಾಮದುರ್ಗ ತಾಲ್ಲೂಕಿನಲ್ಲಿ ಎಲ್ಲಾ ಕಾರ್ಯಕ್ರಮಗಳು ನಡೆಯುತ್ತಿವೆ. ತಾವು ದಯವಿಟ್ಟು ಇದಕ್ಕೆ ಒಂದು ಶಿಸ್ತುಬದ್ದವಾಗಿ, ಕಟ್ಟುನಿಟ್ಟಿನ ಒಂದು ನಿಯಮವನ್ನು ಮಾಡಬೇಕು, ಇಲ್ಲವೆಂದರೆ ನಮಗೆಲ್ಲಾ ತೊಂದರೆಯಾಗುತ್ತದೆ. ನಾವು ಮಂತ್ರಿಯವರಲ್ಲಿ ನಮ್ಮ ಘನತೆಗೆ ಕುಂದು ಬರುತ್ತದೆ, ನಾವು ಹೋಗುವುದು ಬೇಡವೆಂದು ಕೇಳಿಕೊಂಡೆ. ಅದಕ್ಕೆ ಅವರು change ಮಾಡಿದ್ದಾರೆ, ಬರುತ್ತೇನೆಂದು ಹೇಳಿದರು. ಆದರೂ ಕೂಡ ಮಾಜಿ ಎಂ.ಎಲ್.ಎ. ಹೆಸರನ್ನು ಹಾಕಿದ್ದಕ್ಕೋಸ್ಕರ ಈ ಸಾರಿ adjust ಮಾಡಿಕೊಳ್ಳಿಯೆಂದು ಹೇಳಿದರು. ಅದಕ್ಕೆ ನಾನು ಇದನ್ನು adjust ಮಾಡಿಕೊಳ್ಳುವುದಲ್ಲ, ಕಾನೂನು ರೀತಿಯಲ್ಲಿ ನಮಗೆ ನಮ್ಮ ತಾಲ್ಲೂಕಿನಲ್ಲಿ ಮಾನ ಮಾರ್ಯದೆ ಹೋಗುವ ಪ್ರಶ್ನೆ. ನಾವು ಎಂ.ಎಲ್.ಎ.ಗಳಾಗಿ ನಮಗೆ ಮಾನ ಮರ್ಯಾದೆ ಇಲ್ಲದ ಹಾಗೆ ಆಗಿದೆ. ಮಾನ್ಯ ಮುಖ್ಯಮಂತ್ರಿಯವರು ಬಂದಿದ್ದಾರೆ, ಸರ್ಕಾರಿ ವೇದಿಕೆಯ ಮೇಲೆ ಮಾಜಿ ಎಂ.ಎಲ್.ಎ.ಗಳು ಬಂದು ಪಕ್ಕದಲ್ಲೇ ಕುಳಿತುಕೊಳ್ಳುತ್ತಾರೆ. ಅವರೇ ಸಮಾರಂಭದಲ್ಲಿ ಮಾತನಾಡುತ್ತಾರೆ. ಈ ರೀತಿಯಾದರೆ ನಮಗೆ ಹೇಗೆ? ಮಾನ್ಯ ಅಧ್ಯಕ್ಷರೆ, ದಯವಿಟ್ಟು ಇದರ ಬಗ್ಗೆ serious ಆಗಿ action ತೆಗೆದುಕೊಳ್ಳಬೇಕು.

(ಮೊಂದಲ)

ಅಧ್ಯಕ್ಷರು : ಒಂದು ನಿಮಿಷ, ಕೇಳುವುದಕ್ಕೂ ತಾಳ್ಮೆ ಇಲ್ಲವಾ? ಇದೇ ರೀತಿಯ ಒಂದು ಪ್ರಸ್ತಾವನೆಯನ್ನು ಶ್ರೀ ಎನ್.ಹೆಚ್.ಶಿವಶಂಕರರೆಡ್ಡಿ ಹಾಗೂ ಶ್ರೀ ಎನ್. ಸಂಪಂಗಿಯವರು ಕೊಟ್ಟಿದ್ದಾರೆ. ಇವರ ಎಲ್ಲಾ ಸಮಸ್ಯೆಗಳು ಒಂದೇ ಆಗಿದೆ. ಈ protocol ಬಗ್ಗೆ ಸರ್ಕಾರ ಗಂಭೀರವಾಗಿ ತೆಗೆದುಕೊಂಡು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಡುವುದು ಒಳ್ಳೆಯದೆಂದು ನನ್ನ ಭಾವನೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ : ಮಾನ್ಯ ಅಧ್ಯಕ್ಷರೆ, ಶಾಸಕರ ಮೇಲೆ ಗೌರವ ಇಲ್ಲದ ಹಾಗೆ ಆಗಿದೆ.

ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ (ಗೌರಿಬಿದನೂರು): ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರದ ಮುದ್ದೇನಹಳ್ಳಿಯಲ್ಲಿ 24ನೇ ತಾರೀಖಿನಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಶಿಲಾನ್ಯಾಸ ಕಾರ್ಯಕ್ರಮ ನಡೆಯಿತು. ಅದು ಯಾವುದೇ ಜಿಲ್ಲೆ ಕಾರ್ಯಕ್ರಮಗಳು ಇರಬಹುದು, ರಾಜ್ಯದ ಕಾರ್ಯಕ್ರಮಗಳು ಇರಬಹುದು. ಈ ಕಾರ್ಯಕ್ರಮಕ್ಕೆ ಸ್ವಾಭಾವಿಕವಾಗಿ ಎಲ್ಲಾ ಶಾಸಕರನ್ನು ಆಹ್ವಾನ ಮಾಡುವುದು ಶಿಷ್ಟಾಚಾರ ಇದೆ. ಆದರೆ ಆ ಒಂದು ಸಮಾರಂಭಕ್ಕೆ ನಮ್ಮ ಯಾವ ಶಾಸಕರನ್ನು ಅಧಿಕೃತವಾಗಿ ಆಹ್ವಾನಿಸಿರಲಿಲ್ಲ. ಆದರೂ ಕೂಡ ಇದು ಜಿಲ್ಲೆಯ ಕಾರ್ಯಕ್ರಮವೆಂದು ಹೇಳಿ ಇದಕ್ಕೆ ಘನತೆವೆತ್ತ ರಾಜ್ಯಪಾಲರು, ಉನ್ನತ ಶಿಕ್ಷಣ ಸಚಿವರು, ಮಾನ್ಯ ವೀರಪ್ಪಮೊಯಿಲಿಯವರು ಅತಿಥಿಗಳಾಗಿ ಬಂದಿದ್ದರು. ನಾವು ಅಲ್ಲಿಗೆ ಹೋಗಿ ಆಹ್ವಾನ ಪತ್ರಿಕೆಯನ್ನು ನೋಡಿದಾಗ ಅದರಲ್ಲಿ ಒಬ್ಬರೇ ಒಬ್ಬ ಜಿಲ್ಲೆಯ ವಿಧಾನ ಪರಿಷತ್ತಿನ ಸದಸ್ಯರನ್ನು ಹಾಗೂ ಸ್ಥಳೀಯ ಶಾಸಕರು ಈ ಇಬ್ಬರನ್ನೂ ಮಾತ್ರ ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಿದ್ದರು. ಆದರೂ ಇದು ಜಿಲ್ಲೆಯ ಕಾರ್ಯಕ್ರಮವೆಂದು ನಾವೆಲ್ಲರೂ ಹೋಗಿದ್ದೆವು. ಅಲ್ಲಿ ನೋಡಲಾಗಿ ಆಹ್ವಾನ ಪತ್ರಿಕೆಯಲ್ಲಿ ಇಲ್ಲದೇ ಇರುವ ಇನ್ನಿಬ್ಬರು ವಿಧಾನ ಪರಿಷತ್ತಿನ ಸದಸ್ಯರು ಆ ವೇದಿಕೆಯ ಮೇಲೆ ಇದ್ದರು. ನಮಗೆ ಅಲ್ಲಿ ಎಲ್ಲೂ ಕುಳಿತುಕೊಳ್ಳುವುದಕ್ಕೆ ಅವಕಾಶ ಕೊಡಲಿಲ್ಲ. ನಾವೇ ಕೆಳಗಡೆ ಸೀಟುಗಳನ್ನು ಹುಡುಕಿಕೊಂಡು ಕುಳಿತುಕೊಳ್ಳುವಂಥ ಪರಿಸ್ಥಿತಿ ಬಂತು. ಕನಿಷ್ಠ

ಸೌಜನ್ಯಕ್ಕಾದರೂ ಅಧಿಕಾರಿಗಳು ವೇದಿಕೆ ಮೇಲೆ ಕರೆದು ಶಾಸಕರಿಗೆ ಗೌರವವನ್ನು ಕೊಡುವ ಕೆಲಸವನ್ನು ಮಾಡಬೇಕಾಗಿತ್ತು. ಇಲ್ಲಿ ಉದ್ದೇಶಪೂರ್ವಕವಾಗಿ ಶಾಸಕರ ಹಕ್ಕಿಗೆ, ಗೌರವಕ್ಕೆ, ಚ್ಯುತಿ ಬರುವ ನಡವಳಿಕೆಯಾಗಿದೆಯೆಂದು ನಮಗೆ ನೋವಾಗಿದೆ. ಆದುದರಿಂದ ಸಂಬಂಧಪಟ್ಟಂಥ ಅಧಿಕಾರಿಗಳ ಮೇಲೆ ಯಾವ ರೀತಿಯಾಗಿ ತಾವು ಕ್ರಮ ಜರುಗಿಸುತ್ತೀರಿ? ಮತ್ತು ಇದನ್ನು ಹಕ್ಕುಬಾಧ್ಯತಾ ಸಮಿತಿಗೆ refer ಮಾಡಿ, ಶಾಸಕರುಗಳ ಗೌರವಕ್ಕೆ, ಹಕ್ಕುಗಳಿಗೆ, ಸೂಕ್ತವಾದ ರಕ್ಷಣೆಯನ್ನು ನೀಡಬೇಕೆಂದು ನಾನು ತಮ್ಮಲ್ಲಿ ಮನವಿಯನ್ನು ಮಾಡುತ್ತೇನೆ.

ಶ್ರೀ ಪಿ.ಎಂ. ಅಶೋಕ್ : ಕಾರ್ಯಕ್ರಮದ ಒಂದು ವಾರ ಮೊದಲೇ ನಾನು Chief Secretaryಯವರಿಗೆ ಕೊಟ್ಟಿದ್ದೇನೆ, D.C.ಯವರಿಗೂ ಹೇಳಿದ್ದೇನೆ, ಮಂತ್ರಿಗಳಿಗೂ ಹೇಳಿದ್ದೇನೆ. ಯಾವ ಅಧಿಕಾರಿಯ ಮೇಲೂ action ತೆಗೆದುಕೊಂಡಿಲ್ಲ. ದಯವಿಟ್ಟು ಯಾರಾದರೂ ಇಂಥ ನಾಲ್ಕೈದು ಅಧಿಕಾರಿಗಳ ಮೇಲೆ action ತೆಗೆದುಕೊಂಡರೆ ಚೆನ್ನಾಗಿರುತ್ತದೆ. ಇಲ್ಲದಿದ್ದರೆ ಅವರಿಗೆ ಭಯ ಭಕ್ತಿ ಬರುವುದಿಲ್ಲ. ದಯವಿಟ್ಟು ಒಂದಿಬ್ಬರನ್ನು suspend ಮಾಡಬೇಕು. ಏಕೆಂದರೆ, ಇದು ನನ್ನ prestige question ಆಗಿದೆ.

(ಗೊಂದಲ)

ಅಧ್ಯಕ್ಷರು : ಆಯಿತು, ಎಲ್ಲ ಕಡೆ ಇದೇ ಸಮಸ್ಯೆಯಾಗಿದೆ.

ಶ್ರೀ ರುದ್ರೇಶ್‌ಗೌಡ : ಒಂದೇ ಒಂದು clarification ಬೇಕು.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, . . .

(ಗೊಂದಲ)

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು ಎದ್ದು ನಿಂತಾಗಲಾದರೂ ತಾವು ಕುಳಿತುಕೊಳ್ಳುವ ಸೌಜನ್ಯವನ್ನು ತೋರಿಸಿ. ನಿಮ್ಮ ನಾಯಕರು ಎದ್ದು ನಿಂತಾಗ ನಿಮಗೆ ಕುಳಿತುಕೊಳ್ಳುವ ಸೌಜನ್ಯವೂ ಇಲ್ಲವೇ?

ಶ್ರೀ ಸಿದ್ದರಾಮಯ್ಯ : ರುದ್ರೇಶಗೌಡರೇ ಕುಳಿತುಕೊಳ್ಳಿ. ಮಾನ್ಯ ಅಧ್ಯಕ್ಷರೆ, ಆಗಿಂದಾಗ್ಗೆ ಈ ರೀತಿ ನಡೆಯುತ್ತಲೇ ಇದೆ. ಈ ರೀತಿಯಾಗಿರುವುದು, it is not for the first time. ಹಿಂದೆಯೆಲ್ಲಾ

ಇಂಥವುಗಳ ಬಗ್ಗೆ ಇಲ್ಲಿ ಚರ್ಚೆಯಾಗಿದೆ. ಈ ಕಡೆ ಬಹಳ ಜನ ಶಾಸಕರು ಹೇಳುತ್ತಿದ್ದಾರೆ. ಎಲ್ಲಾ ಕಡೆ ಈ ರೀತಿ ನಡೆಯುತ್ತಿದೆ. ಹಿಂದಿನ ವಿಧಾನಸಭೆಯಿದ್ದಾಗಲೂ ಒಂದು ಸಾರಿ ಈ ಬಗ್ಗೆ ಚರ್ಚೆಯಾಗಿತ್ತು. ಆಗ ಇದ್ದಂಥ Speakerರವರಿಗೆ ಕೂಡ ನಾವು ಹೇಳಿದ್ದೆವು, Business Advisory Committee ಯಲ್ಲೂ ಕೂಡ ಹೇಳಿದ್ದೆವು. ಇದರ ಬಗ್ಗೆ ಸ್ಪಷ್ಟವಾದಂಥ, un ambiguity ಇರತಕ್ಕಂಥ ಇನ್ನೊಂದು circular ಹೊರಡಿಸಬೇಕಾದಂಥ ಅಗತ್ಯವಿದೆ ಎಂದು ಹೇಳಿದ್ದೆವು. D.C.ಗಳು, ಕೆಲವು ಅಧಿಕಾರಿಗಳು protocol ಬಗ್ಗೆ ಹೊರಡಿಸಿರತಕ್ಕಂಥ circular ಅನ್ನು mis–interpret ಮಾಡಲು ಶುರು ಮಾಡಿದ್ದಾರೆ. Protocol ಪ್ರಕಾರ ಯಾರು ಯಾರು ಇರಬೇಕು, priority ಮೇಲೆ ಯಾರು ಇರುತ್ತಾರೆ ಎನ್ನುವುದನ್ನು ಕೂಡ ಕೊಟ್ಟಿದ್ದಾರೆ. ಹಿಂದಿನ ಎಲ್ಲ ಸರ್ಕಾರಗಳು ಇದ್ದಾಗಲೂ ಕೂಡ ಮತ್ತು ಈಗಿನ ಸರ್ಕಾರದಿಂದಲೂ ಕೂಡ ಬಹಳ ಸ್ಪಷ್ಟವಾದ circulars ಹೋಗಿವೆ. ಚಾಲ್ತಿಯಲ್ಲಿರುವ circular ಪ್ರಕಾರ, ಯಾರು ಆ ಕ್ಷೇತ್ರವನ್ನು represent ಮಾಡುತ್ತಾರೋ ಅವರು ಮತ್ತು ಒಂದೇ ತಾಲ್ಲೂಕು ಎರಡು ಕಡೆ ಸೇರಿದ್ದರೆ, majority ಯಾರು represent ಮಾಡುತ್ತಾರೋ ಆ ಶಾಸಕರೇ ಸರ್ಕಾರಿ ಕಾರ್ಯಕ್ರಮಗಳಲ್ಲಿ preside ಮಾಡಬೇಕು ಎಂದು ಇದರಲ್ಲಿ ಬಹಳ ಸ್ಪಷ್ಟವಾಗಿ ಇದೆ. ಇದರಲ್ಲಿ ಯಾವ ambiguity ಇಲ್ಲ. ಸರ್ಕಾರಿ ಕಾರ್ಯಕ್ರಮಗಳಲ್ಲಿ ಶಾಸಕರನ್ನು ಬಿಟ್ಟು ಬೇರೆ ಯಾರೂ ಕೂಡ preside ಮಾಡಲು ಬರುವುದಿಲ್ಲ. ಖಾಸಗಿ ಕಾರ್ಯಕ್ರಮಗಳಾದರೆ ಅದು ಬೇರೆ ವಿಚಾರ. ಆದರೆ ಸರ್ಕಾರಿ ಕಾರ್ಯಕ್ರಮಗಳಲ್ಲಿ invariably ಅಲ್ಲಿನ M.L.A.ಗಳೇ preside ಮಾಡಬೇಕು. M.L.C.ಗಳು ಅಥವಾ ಯಾವುದೋ ಛೇರ್ಮನ್‌ಗಳು ಅಥವಾ M.P.ಗಳು ಇವರ್ಯಾರೂ preside ಮಾಡಲು ಬರುವುದಿಲ್ಲ. ಈಗ ಏನು ಮಾಡುತ್ತಿದ್ದಾರೆ ಎನ್ನುವುದಕ್ಕೆ ಉದಾಹರಣೆಯಾಗಿ ಹೇಳಬೇಕೆಂದರೆ, ಜೆ.ಡಿ.ನಾಯಕ್‌ರವರು ಗೆದ್ದಿದ್ದಾರೆ. ಇವರ ವಿರುದ್ಧ ಶಿವಾನಂದ ನಾಯಕ್‌ರವರು ಸೋತಿದ್ದಾರೆ. ಆದರೆ ಅವರನ್ನು ಯಾವುದೋ ಒಂದಕ್ಕೆ ಛೇರ್ಮನ್ ಮಾಡಿಬಿಟ್ಟಿರುತ್ತಾರೆ. ಯಡಿಯೂರಪ್ಪನವರ ಸರ್ಕಾರದಲ್ಲಿ ಎಲ್ಲಾ

ಛೇರ್ಮನ್‌ಗಳಿಗೂ cabinet rank ಕೊಟ್ಟುಬಿಟ್ಟಿದ್ದಾರೆ. ಅದಕ್ಕೆ ಕೆಲಸ ಇರಲಿ, ಇಲ್ಲದೇ ಇರಲಿ, cabinet rank ಕೊಟ್ಟಿದ್ದಾರೆ. Beggers Committee ಎಂದು ಒಂದು ಸಮಿತಿ ಇದೆ. ಅದಕ್ಕೂ cabinet rank ಕೊಟ್ಟಿದ್ದಾರೆ. ಅದಕ್ಕೆ ಕಾಸೇ ಇರುವುದಿಲ್ಲ, ಅದಕ್ಕೂ ಒಂದು cabinet rank. ನಮ್ಮ ಮೈಸೂರು ತಾಲ್ಲೂಕಿನವರೂ ಒಬ್ಬರು ಆಗಿಬಿಟ್ಟಿದ್ದಾರೆ. ಹಿಂದೆ ಟಿ.ಆರ್.ಶಾಮಣ್ಣನವರು ಇದ್ದರು. ಆದರೆ ಆಗ ಅವರಿಗೆ rank ಏನೂ ಕೊಟ್ಟಿರಲಿಲ್ಲ. ಈಗ ಎಲ್ಲರಿಗೂ cabinet rank ಕೊಡುತ್ತಾರೆ. ಛೇರ್ಮನ್‌ಗಳಿಗೂ cabinet rank ಕೊಟ್ಟಿರುವುದರಿಂದ ಅವರೂ ಸಹ cabinet minister ಎಂದು ತಿಳಿದುಕೊಂಡಿದ್ದಾರೆ. It is totally wrong interpretation. Minister is minister, Cabinet minister is a Minister, State minister is a Minister. ಛೇರ್ಮನ್‌ಗಳಿಗೆ cabinet rank ಕೊಟ್ಟ ತಕ್ಷಣ it can't be construed as a Minister in the Government. He is not a Minister, it is very clear. ಇದರಲ್ಲಿ ಎಲ್ಲೂ ಕೂಡ ಛೇರ್ಮನ್‌ಗಳು ಎಂದು ಹೇಳುವುದಿಲ್ಲ. ಛೇರ್ಮನ್‌ಗಳು ಎಂದರೆ ಯಾವ ಛೇರ್ಮನ್‌ಗಳು ಇರಬಹುದು ಎಂದು ಕೂಡ ಇದರಲ್ಲಿ mention ಮಾಡಿದ್ದಾರೆ. Deputy Chairman – Rajyasabha, Chairman– S.C./S.T. Development Corporation, Chairman – Minority Commission, Chairman – Human Rights Commission, ಈ ರೀತಿಯ ಛೇರ್ಮನ್‌ಗಳು ಆಗಬಹುದೇ ಹೊರತು Beggers Committee ಛೇರ್ಮನ್ ಅಲ್ಲ, Housing Board ಛೇರ್ಮನ್ ಅಲ್ಲ ಅಥವಾ ಯಾವುದೇ ಇನ್ನೊಂದು ಸಮಿತಿಯ ಛೇರ್ಮನ್ ಅಲ್ಲ. ಈ ಛೇರ್ಮನ್‌ಗಳನ್ನು Human Rights Commission ಛೇರ್ಮನ್‌ಗೆ ಸಮ ಮಾಡಿ, protocol ಪ್ರಕಾರ ಅವರನ್ನು ಕರೆಯಲೇಬೇಕು ಎಂದು ಮಾಡಿ, ಅವರನ್ನು ಕರೆಸಿಕೊಂಡಿರುತ್ತಾರೆ. This is very bad. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ರೀತಿ ಮಾಡುವುದು ಸರಿಯಲ್ಲ. ಚುನಾಯಿತ M.L.A.ಗಳಿಗೆ ಅವಮಾನ ಮಾಡುವುದು breach of Privilege ಆಗುತ್ತದೆ, ಅವರ

ಹಕ್ಕುಚ್ಯುತಿಯಾಗುತ್ತದೆ. ಅವರಿಗೆ ಜನ ಕೊಟ್ಟಿರುವ ಹಕ್ಕನ್ನು ಮೊಟಕು ಮಾಡಿದಂತಾಗುತ್ತದೆ. It is not correct. ಈ ರೀತಿ ಯಾರು ಮಾಡುತ್ತಿದ್ದಾರೆ, ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಜಿಲ್ಲಾಧಿಕಾರಿಗಳು ಇದನ್ನೆಲ್ಲ ತೀರ್ಮಾನ ಮಾಡಬೇಕಾಗುತ್ತದೆ. ಈ ರೀತಿಯ ಸಂದರ್ಭ ಬಂದಾಗ ನಾನು ಒಂದು ಸಾರಿ ಮೈಸೂರು ಜಿಲ್ಲಾಧಿಕಾರಿಯವರೊಂದಿಗೆ ಮಾತನಾಡಿದೆ. ಅವರು cabinet rankನಲ್ಲಿದ್ದಾರೆ, ಆದ್ದರಿಂದ ಸೇರಿಸಿದ್ದೇವೆ ಎಂದು ಹೇಳುತ್ತಾರೆ. Cabinet rank ಕೊಟ್ಟ ತಕ್ಷಣ ಅವರು Minister ಆಗುತ್ತಾರೆಯೇ? ಹಾಗೆ ಮಾಡಲು ಬರುವುದಿಲ್ಲ ಎಂದರೆ, clarificationಗಾಗಿ ನಾನು ಸರ್ಕಾರಕ್ಕೆ ಬರೆದಿದ್ದೇನೆ, ಇನ್ನೂ clarification ಬಂದಿಲ್ಲ ಎಂದು ಹೇಳಿ ಎರಡು ವರ್ಷಗಳಿಂದ clarification ಕೇಳುತ್ತಿದ್ದಾರೆ. ಈಗ ಅಶೋಕ್‌ರವರಿಗೆ ಆಗಿರಬಹುದು, ಜೆ.ಡಿ.ನಾಯಕ್‌ರವರಿಗೆ ಆಗಿರಬಹುದು, ಶಿವಶಂಕರರೆಡ್ಡಿಯವರಿಗೆ ಆಗಿರಬಹುದು, ಮಂಜುರವರಿಗೆ ಆಗಿರಬಹುದು, ರುದ್ರೇಶ್‌ಗೌಡರವರಿಗೆ ಆಗಿರಬಹುದು. ಇದು ಇವರೆಲ್ಲರ ಹಕ್ಕುಗಳನ್ನು ಮೊಟಕುಗೊಳಿಸತಕ್ಕಂಥ ಪ್ರಯತ್ನ. It amounts to clear case of breach of privilege. ಇದು ಅವರ ಹಕ್ಕುಚ್ಯುತಿ ಆಗುತ್ತದೆ. ಹಾಗಾಗಿ ಎಲ್ಲವನ್ನೂ ಕೂಡ Privilege Committeeಗೆ refer ಮಾಡಬೇಕು. ಯಾರು ತಪ್ಪು ಮಾಡಿದ್ದಾರೆ, ಅವರಿಗೆ ಶಿಕ್ಷೆ ಮಾಡಬೇಕಾಗುತ್ತದೆ. ಮುಂದೆ ಈ ರೀತಿಯಾಗದ ರೀತಿಯಲ್ಲಿ ಸರ್ಕಾರ ಎಚ್ಚರಿಕೆ ವಹಿಸಬೇಕು. ಇದರ ಬಗ್ಗೆ ನಾನು ನಿಮ್ಮ ಜೊತೆ ಕೂಡ ಮಾತನಾಡಿದೆ. ಈ ಬಗ್ಗೆ ಸ್ಪಷ್ಟವಾದಂಥ ಇನ್ನೊಂದು circular ಅನ್ನು ಹೊರಡಿಸಬೇಕು. There should not be any confusion, there should not be any ambiguity. ಈ ರೀತಿಯ ಒಂದು circular ಹೊರಡಿಸಬೇಕು. ಗೊತ್ತಿದ್ದೂ ಕೂಡ ಇಂಥ ತಪ್ಪುಗಳನ್ನು ಪದೇಪದೇ ಮಾಡಿದರೆ ಅದು ಈ ಸದನಕ್ಕೆ ಅಗೌರವ ಮಾಡಿದ ಹಾಗೆ ಆಗುತ್ತದೆ. ಮಾನ್ಯ ಸದಸ್ಯರು ನಿರ್ಭೀತಿಯಿಂದ ಕೆಲಸ ಮಾಡುವುದು, ಮರ್ಯಾದೆಯಿಂದ ಕೆಲಸ ಮಾಡುವುದು ಕಷ್ಟವಾಗುತ್ತದೆ. ಆ ಕಾರಣಕ್ಕಾಗಿ ದಯವಿಟ್ಟು ಸರ್ಕಾರ ಇದನ್ನು

ಗಂಭೀರವಾಗಿ ಪರಿಗಣಿಸಬೇಕು, ಇದರ ಬಗ್ಗೆ ಸ್ಪಷ್ಟವಾದ ಹೇಳಿಕೆ ಕೊಡಬೇಕು ಮತ್ತು ಸ್ಪಷ್ಟವಾದಂಥ ತೀರ್ಮಾನವನ್ನು ಮಾಡಬೇಕು ಮತ್ತು un–ambiguity ಇರತಕ್ಕ, ಬಹಳ clarity ಇರತಕ್ಕ ಒಂದು notification ಅನ್ನು ಮತ್ತೆ D.P.A.R.ಯಿಂದ issue ಮಾಡಿಸಬೇಕು ಎಂದು ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಬೆಳಗಾಂನಲ್ಲಿ ಆಗಿರತಕ್ಕಂಥ ಘಟನೆಯ ಒಂದು ವಿಚಾರವನ್ನು ಹೇಳುವುದಾದರೆ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯಕ್ರಮಕ್ಕೆ invitation print ಮಾಡಿಸಿರತಕ್ಕಂಥವರು ಅಧಿಕಾರಿಗಳು. ಕಾರ್ಯ ನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಮತ್ತು ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಈ ಅಧಿಕಾರಿಗಳೇ ಕಾರ್ಯಕ್ರಮಕ್ಕೆ invite ಮಾಡಿದ್ದಾರೆ. ಆ ಭಾಗದ ಶಾಸಕರು ಮುಖ್ಯ ಕಾರ್ಯದರ್ಶಿಗಳಿಗೆ 11ನೇ ತಾರೀಖು ಒಂದು ಪತ್ರವನ್ನು ಬರೆಯುತ್ತಾರೆ. ಈ ಕಾರ್ಯಕ್ರಮವಿದ್ದುದು 16ನೇ ತಾರೀಖು. 11ನೇ ತಾರೀಖು ಒಂದು ಪತ್ರವನ್ನು ಬರೆದು, ಈ ರೀತಿ ಶಿಷ್ಟಾಚಾರ ಉಲ್ಲಂಘನೆಯಾಗುತ್ತದೆ ಎಂದು ಹೇಳಿದ ಮೇಲೂ ಕೂಡ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಅಷ್ಟೇ ಅಲ್ಲದೇ, ಶಾಸಕರೇ ನೇರವಾಗಿ ಮಂತ್ರಿಗಳಿಗೆ ಮಾತನಾಡಿದಾಗಲೂ ಕೂಡ ಈ ರೀತಿ ನಡೆಯುತ್ತದೆ ಎಂದರೆ ಹೇಗೆ? ಕಳೆದ ಎರಡು ವರ್ಷಗಳಲ್ಲೇ ಈ ವಿಷಯ ನಾಲ್ಕೈದು ಸಾರಿ ಚರ್ಚೆಯಾಗಿದೆ. ಜವಾಬ್ದಾರಿಯಿಂದ ಆಯ್ಕೆಯಾಗಿ, ಜನ ಪ್ರತಿನಿಧಿಯಾಗಿರತಕ್ಕಂಥವರು, ನಮ್ಮನ್ನು ರಕ್ಷಣೆ ಮಾಡಬೇಕಾಗಿರತಕ್ಕಂಥ ನಿಮ್ಮ ಮುಂದೆ ಬಂದು ಎಷ್ಟು ಸಾರಿ ಗೋಳು ಹೇಳಬೇಕು. ಅದಕ್ಕೊಂದು ಇತಿಮಿತಿ ಇದೆ. ನಾನು ಹೇಳುತ್ತೇನೆ, ದಯಮಾಡಿ ಇದನ್ನು privilege committeeಗೆ refer ಮಾಡುವುದಕ್ಕಿಂತ ಹೆಚ್ಚಾಗಿ ನೀವು ತಪ್ಪು ಮಾಡಿರುವವರಿಗೆ ಶಿಕ್ಷೆ ಕೊಡಲೇಬೇಕು. ಆ ಶಿಕ್ಷೆ ಪ್ರಮಾಣ ಏನು, ಎಷ್ಟು ಎನ್ನುವುದರ ಬಗ್ಗೆ ನೀವು ಒಂದು circular ಹೊರಡಿಸಿ retrospective effect ಬರಬೇಕು. ಮಾನ್ಯ ಶಿವಶಂಕರ ರೆಡ್ಡಿಯವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಅಲ್ಲಿ ಬಂದಿರುವಂಥದ್ದು Universities. Universitiesಗೆ ಸಂಬಂಧಿಸಿದಂತೆ ಅವರ

3.50 ಪಿ.ಎಂ.

ಕ್ಷೇತ್ರದಲ್ಲಿ ಯಾವುದೇ ಕಾರ್ಯಕ್ರಮವಾದರೂ ಅವರು ಶಾಸಕರನ್ನು ಪರಿಗಣನೆಗೆ ತೆಗೆದುಕೊಳ್ಳುವುದೇ ಇಲ್ಲ. ಖಾಸಗಿಯಾಗಿರತಕ್ಕಂಥ ಬ್ಯಾಂಕುಗಳಿರಬಹುದು, ಅವರು ಕೇಳುವುದೇ ಇಲ್ಲ. Co-operative ನಲ್ಲೂ ಕೇಳುವುದೇ ಇಲ್ಲ. ದಯಮಾಡಿ ಇದರ ಬಗ್ಗೆ ನೀವು ಏನು circular ಹೊರಡಿಸುತ್ತೀರಿ, ಒಂದು ಕಡೆ ಮಾಡಿರತಕ್ಕಂಥ ತಪ್ಪಿಗಾಗಿ privilege committee ಗೆ ಒಪ್ಪಿಸಿ. ಇವತ್ತು ಎಲ್ಲಿ ಹಕ್ಕುಚ್ಯುತಿಯಾಗಿದೆ, ಅದರ ಬಗ್ಗೆ ಪರಿಶೀಲನೆ ಮಾಡುವುದರ ಜೊತೆಗೆ ಈಗಾಗಲೇ ಮಾನ್ಯ ಸಿದ್ದರಾಮಯ್ಯನವರು ಹೇಳಿದ ಹಾಗೆ ಒಂದು ಸಮಗ್ರವಾಗಿರತಕ್ಕಂತ ಇನ್ನೊಂದು circular ಹೊರಡಿಸಬೇಕು. ಅದರೊಳಗೆ Universities Programmes ಆಗಲಿ, ಬ್ಯಾಂಕುಗಳ programmes ಆಗಲಿ, ಅಥವಾ ಯಾವುದೇ programme ಆದರೂ ಕೂಡ ಅದರಲ್ಲಿ ಇವತ್ತು ಶಿಷ್ಟಾಚಾರ ಪಾಲನೆ ಆಗಬೇಕು. ಶಿಷ್ಟಾಚಾರವೆನ್ನುವುದು ಏನೆಂದರೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಶಾಸಕರೇ ಮುಖ್ಯ. ಅವರು ಯಾವುದೇ ಪಕ್ಷಕ್ಕೆ ಸೇರಿರಬಹುದು ಅದು ಬೇರೆ ಪ್ರಶ್ನೆ. ಯಾರೋ ಸೇರಿ ಸರ್ಕಾರ ಮಾಡಿರಬಹುದು ಆ ಪ್ರಶ್ನೆ ಬೇರೆ. The real representative of the democracy is MLA. MLA ಅಧ್ಯಕ್ಷತೆಯಲ್ಲಿ ಆಗಲೇಬೇಕೆನ್ನುವ ರೀತಿಯಲ್ಲಿ ಸರ್ಕಾರಿ ಆದೇಶವಿದ್ದಾಗ್ಯೂ ಕೂಡ ಈ ರೀತಿ ಉಲ್ಲಂಘನೆ ಮಾಡುತ್ತಾರೆಂದು ಹೇಳಿದರೆ ಅದೂ ಕೂಡ ಇತ್ತೀಚೆಗೆ, ಮಾನ್ಯ ಸುರೇಶ್‌ಕುಮಾರ್‌ರವರೆ ಗಮನಿಸಬೇಕು. ತಮ್ಮ ಅಧಿಕಾರದಲ್ಲಿ ಕಳೆದ ಎರಡು ವರ್ಷಗಳಿಂದ ಬಹಳ ಆಗುತ್ತಿದೆ. ಏಕೆ ಹೀಗೆ ಆಗುತ್ತಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ದಯಮಾಡಿ ಇದರ ಬಗ್ಗೆ ಎಲ್ಲೋ ಒಂದು ಕಡೆ ಕಡಿವಾಣ ಹಾಕಬೇಕು. ಇದು ಪ್ರಜಾಪ್ರತಿನಿಧಿಗಳಿಗೆ ಮಾಡಿದಂಥ ಅವಮಾನವಲ್ಲ, ಪ್ರಜಾತಂತ್ರ ವ್ಯವಸ್ಥೆಗೇ ಮಾಡಿದಂಥ ಅವಮಾನವಾಗುತ್ತದೆಂದು ತಾವು ಅರ್ಥಮಾಡಿಕೊಳ್ಳಬೇಕು. ಇದೇ ವಿಚಾರವಾಗಿ ಪದೇ ಪದೇ ಸದನದಲ್ಲಿ ಚರ್ಚೆ ಯಾಗುವಂಥದ್ದು ಸಾಧುವಲ್ಲ. ತಾವು ಕ್ಯಾಬಿನೆಟ್ ಸಚಿವರಿದ್ದೀರಿ, ಈ ವಿಚಾರವನ್ನು ತಾವೆಲ್ಲರೂ ಕೂಡ

ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ಮಾಡಬೇಕು. ಎರಡನೆಯದಾಗಿ, ಈ ಕೆಂಪು ದೀಪವನ್ನು ಹಾಕಿಕೊಂಡು ಹೋಗುತ್ತಾರೆ. ಈ ಕೆಂಪು ದೀಪವನ್ನು ವಾಹನದ ಮೇಲೆ ಯಾರು ಹಾಕಿಕೊಂಡು ಹೋಗಬಹುದು ಹೇಳಿ. ನನಗೆ ಗೊತ್ತಿರುವ ಪ್ರಕಾರ ಕ್ಯಾಬಿನೆಟ್ ಸಚಿವರಾಗಿರತಕ್ಕಂಥವರು ಕೆಂಪು ದೀಪ ಹಾಕಿಕೊಳ್ಳಬಹುದು. Speaker, Leader of the Opposition ಇವರು ಹಾಕಬಹುದು. ಏಕೆಂದರೆ, ಕೆಂಪು ದೀಪವನ್ನು ಯಾರ್ಯಾರು ಹಾಕಿಕೊಳ್ಳಬಹುದು ಎನ್ನುವುದಕ್ಕೆ ಒಂದು order ಇದೆ. ಆ order ನಲ್ಲಿ ಹೆಸರು ಬಂದರೆ ಮಾತ್ರ ಹಾಕಬಹುದು. ಆದರೆ, ಈಗ ಹೇಗಾಗಿದೆ ಎಂದರೆ, ಕೆಂಪು ದೀಪದ ಹಾವಳಿಯಿಂದಾಗಿ ಮಂತ್ರಿ ಯಾರು, ಕಂತ್ರಿ ಯಾರು ಎಂಬುದು ಗೊತ್ತೇ ಆಗುವುದಿಲ್ಲ. ಇದು ಅವಮಾನವಾದಂತೆ ಆಗುತ್ತದೆ. ಹಾಗಾಗಿ ಅದಕ್ಕಾದರೂ ಒಂದು ನಿಯಂತ್ರಣ ಬೇಕು. Circular ಪ್ರಕಾರ ಕೆಂಪು ದೀಪ ಹಾಕಿಕೊಳ್ಳುವುದಕ್ಕೆ ಬರುವುದಿಲ್ಲವೆನ್ನುವುದಾದರೆ ಅದನ್ನಾದರೂ ನೀವು control ಮಾಡುತ್ತಿದ್ದೀರಾ? ಏನೂ control ಮಾಡುತ್ತಿಲ್ಲ. ಸರ್ಕಾರ ಇಷ್ಟೊಂದು ನಿರ್ಲಿಪ್ತ ಆಗಿಬಿಟ್ಟರೆ ಏನು ಪ್ರಯೋಜನವಾಗುತ್ತದೆ? ಇರತಕ್ಕಂಥ ಸರ್ಕಾರಿ ಆದೇಶವನ್ನು ಪಾಲನೆ ಮಾಡುವುದಕ್ಕೂ ಕೂಡ ನೀವು powers ಅನ್ನು exercise ಮಾಡದಿದ್ದರೆ ಏನು ಪ್ರಯೋಜನ? ಇನ್ನೂ ಕೂಡ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಕೇವಲ ಎರಡು ವರ್ಷವಾಗಿದೆ. ನಾವಾದರೂ 40–50 ವರ್ಷ ಸರ್ಕಾರ ನಡೆಸಿದ್ದೆವು. ನೀವು ಈ ಎರಡೇ ವರ್ಷದಲ್ಲಿ ಆಡಳಿತ ಸರಿಯಾಗಿ ನಡೆಸದಿದ್ದರೆ, ನಿಮ್ಮ ಮಾತನ್ನು ಅಧಿಕಾರಿಗಳು ಕೇಳುತ್ತಿಲ್ಲ, ಆಡಳಿತ ನಿಯಂತ್ರಣವೇ ನಿಮ್ಮಲ್ಲಿಲ್ಲವೆಂದರೆ ಇದು ಯಾವ ಸರ್ಕಾರ? ನಿಮ್ಮ ಜನ್ಮದಲ್ಲಿ ಇನ್ನು ಮುಂದಕ್ಕೆ ಅಧಿಕಾರಕ್ಕೆ ಬರುವುದಕ್ಕಾಗುವುದಿಲ್ಲ. ಆದಷ್ಟು ಬೇಗ ಸರಿಪಡಿಸಿಕೊಳ್ಳಿ.

ಅಧ್ಯಕ್ಷರು : ಆಯಿತು. ಇನ್ನು ಸಚಿವರು ಉತ್ತರ ಹೇಳಿ. ಎಲ್ಲ ಸದಸ್ಯರ issue ಸಹ common ಆಗಿರುವುದರಿಂದ ಸಚಿವರು ಉತ್ತರ ಹೇಳಬೇಕು.

ಶ್ರೀ ಪಿ.ಎಂ. ಅಶೋಕ್ : ಸಂಬಂಧಪಟ್ಟ ಅಧಿಕಾರಿಗಳನ್ನು suspend ಮಾಡಲೇಬೇಕು. ಇಲ್ಲದಿದ್ದರೆ ನಮಗೆ ಬಹಳ ತೊಂದರೆಯಾಗುತ್ತದೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ : ಬಿಜೆಪಿ ಪಕ್ಷದ ಜಿಲ್ಲಾಧ್ಯಕ್ಷರುಗಳೆಲ್ಲ ಮುಂದುಗಡೆ ಬೆಂಚಿನಲ್ಲಿ ಕುಳಿತುಕೊಂಡಿರುತ್ತಾರೆ. ನಾವು ಶಾಸಕರು ಹಿಂದುಗಡೆ ಬೆಂಚಿನಲ್ಲಿ ಕುಳಿತುಕೊಳ್ಳಬೇಕಾಗಿದೆ. ಎಲ್ಲಾ ಜಿಲ್ಲೆಗಳಲ್ಲೂ ಅದೇ ರೀತಿ ಆಗುತ್ತಿದೆ. ಪಕ್ಷದ attachment ಅವರು ಏನು ಮಾಡುತ್ತಾರೆಂದರೆ, ಮುಂದುಗಡೆ role ನಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷರನ್ನು ಕೂರಿಸಿಕೊಂಡಿರುತ್ತಾರೆ, ನಾವು ಶಾಸಕರು ಹಿಂದುಗಡೆ ಕುಳಿತುಕೊಳ್ಳಬೇಕಾಗಿದೆ.

(ಗೊಂದಲ)

ಅಧ್ಯಕ್ಷರು : Please, ಕುಳಿತುಕೊಳ್ಳಿ. ಈ ಬಗ್ಗೆ ಚರ್ಚೆ ಬೇಡ. ಮಂತ್ರಿಯವರು ಉತ್ತರ ಕೊಡಲಿ.

(ಗೊಂದಲ)

ಶ್ರೀ ವೈ.ಎನ್. ರುದ್ರೇಶ್‌ಗೌಡ: ಹಾಸನಕ್ಕೆ ಒಂದು ತಿಂಗಳ ಹಿಂದೆ ಮಾನ್ಯ ಅಶೋಕ್‌ರವರು ಬಂದ ದಿವಸ ಒಂದು ಸಭೆ ಆಗಿತ್ತು. ನಾವು ಇದ್ದೆವು, ಕುಮಾರಸ್ವಾಮಿಯವರು ಇದ್ದರು ನಾವೆಲ್ಲ ಹಿಂದುಗಡೆ ಬೆಂಚಿನಲ್ಲಿ ಕುಳಿತುಕೊಳ್ಳಬೇಕು. ಮುಂದುಗಡೆ ಬೆಂಚಿನಲ್ಲೆಲ್ಲ ಜಿಲ್ಲಾಧ್ಯಕ್ಷರುಗಳು, ತಾಲ್ಲೂಕು ಪಂಚಾಯತಿ ಅಧ್ಯಕ್ಷರುಗಳೆಲ್ಲ ಕುಳಿತರು. ಕುಮಾರಸ್ವಾಮಿಯವರು ಮೂರು ಸಲ ಗೆದ್ದು ಬಂದಂಥವರು. ಅವರು, ನಾವೆಲ್ಲ ಹಿಂದುಗಡೆ ಬೆಂಚಿನಲ್ಲಿ ಕುಳಿತುಕೊಳ್ಳಬೇಕಾಯಿತು. ಈ ತರಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಈ ಬಗ್ಗೆ ಸರಿಯಾದ ಸುತ್ತೋಲೆಯನ್ನು ಹೊರಡಿಸಿ ಸೂಚನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್ : ನಾನು ಈ ವಿಚಾರವಾಗಿ ನಿಲುವಳಿ ಸೂಚನೆ ಕೊಟ್ಟಿದ್ದೆ.

ಅಧ್ಯಕ್ಷರು : No, ಇದು ಶೂನ್ಯವೇಳೆ, ನೀವು notice ಕೊಟ್ಟಿಲ್ಲ. ಆದರೆ, issue ಎಲ್ಲರಿಗೂ ಸಂಬಂಧಿಸಿದ್ದು ಎಂದು ಮಾತನಾಡಿದ್ದಾರೆ. ವಿರೋಧ ಪಕ್ಷದ ನಾಯಕರು ಸಹ ಮಾತನಾಡಿದ್ದಾರೆ. Government is deeply concerned.

ಶ್ರೀ ಕಿಮ್ಮನೆ ರತ್ನಾಕರ್ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಕಛೇರಿಗೆ ಬಂದು ನಿಲುವಳಿ ಸೂಚನೆ ಕೊಟ್ಟಿದ್ದೇನೆ.

ಅಧ್ಯಕ್ಷರು : ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಸದನದ ಗೌರವಾನ್ವಿತ ಸದಸ್ಯರಾದ ಪಿ.ಎಂ. ಅಶೋಕ್‌ರವರು, ಶಿವಶಂಕರರೆಡ್ಡಿಯವರು ಮತ್ತು ಇತರೆ ಎಲ್ಲಾ ಸದಸ್ಯರು ಏನು ಒಂದು ವಿಚಾರ ಪ್ರಸ್ತಾಪ ಮಾಡಿದ್ದಾರೆ, ಮತ್ತು ಆ ವಿಚಾರದಲ್ಲಿ ಪ್ರತಿಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಮತ್ತು ಉಪನಾಯಕರಾದ ಜಯಚಂದ್ರರವರು ಸಾಕಷ್ಟು ವಿಚಾರಗಳನ್ನು, ಸಾಕಷ್ಟು ಮಾರ್ಗದರ್ಶನವನ್ನು ಇವತ್ತು ಕೊಟ್ಟಿದ್ದಾರೆ. ಒಂದು ವಿಚಾರದಲ್ಲಿ ನಾನು ಮಾನ್ಯ ಜಯಚಂದ್ರರವರನ್ನು ಅಭಿನಂದಿಸುತ್ತೇನೆ. ಇದರಲ್ಲಿ ಎರಡು ಭಾಗ ಇದೆ. ಅದೇನೆಂದರೆ, ಹಕ್ಕುಚ್ಯುತಿ ಉಲ್ಲಂಘನೆ ಮತ್ತು ಶಿಷ್ಟಾಚಾರ ಉಲ್ಲಂಘನೆ. ಹಕ್ಕುಚ್ಯುತಿ ಉಲ್ಲಂಘನೆ ಏನು ಎನ್ನುವುದನ್ನು Constitution Article 194 ನಲ್ಲಿ ವಿಧಾನಮಂಡಲಕ್ಕೆ ಏನೇನು ಹಕ್ಕು ಇದೆ ಏನೇನು ಚ್ಯುತಿಯಾಗುತ್ತದೆ ಎನ್ನುವ ಬಗ್ಗೆ ಬಹಳ clear ಆಗಿ ಹೇಳಿದ್ದಾರೆ. ಮಾನ್ಯ ಸದಸ್ಯರುಗಳು ಹೇಳಿರುವಂತೆ ಇಲ್ಲಿ ಆಗುತ್ತಿರುವುದು ಶಿಷ್ಟಾಚಾರದ ಉಲ್ಲಂಘನೆ ಯಾವುದೇ ಕಾರಣದಿಂದಲೂ ಆಗಬಾರದು. But ಅನೇಕ ಪ್ರಸಂಗಗಳು ಇವತ್ತು ಉಲ್ಲೇಖವಾಗಿವೆ, ಅನೇಕ ಪ್ರಸಂಗಗಳು ಸರ್ಕಾರದ ಗಮನಕ್ಕೆ ಬಂದಿದೆ. ಈಗಾಗಲೇ ಹಿಂದೆ ಜಗದೀಶ್ ಶೆಟ್ಟರ್‌ರವರು ಸಭಾಧ್ಯಕ್ಷರಾಗಿದ್ದಾಗ ಇದರ ಬಗ್ಗೆ ಒಂದಿಷ್ಟು ಹೆಜ್ಜೆ, ಕ್ರಮವನ್ನು ತೆಗೆದುಕೊಂಡಿದ್ದರು. ಇವತ್ತೇನು ಶ್ರೀ ಸಿದ್ದರಾಮಯ್ಯನವರು ಹೇಳಿದ್ದಾರೆ, ಆ ಮಾತನ್ನು ಗಂಭೀರವಾಗಿ ತೆಗೆದುಕೊಂಡು ಈ ತರಹದ ಲೋಪ ಪುನ: ಪುನ: ಆಗಬಾರದು, 4 ಸಲ ಆಗಿದೆ, ಈ ಬಗ್ಗೆ ಸದನದಲ್ಲಿ 5ನೇ ಸಲ ಚರ್ಚೆಯಾಗಬಾರದೆನ್ನುವ ಉದ್ದೇಶವಿಟ್ಟುಕೊಂಡು ರಾಜ್ಯದ ಮುಖ್ಯ ಕಾರ್ಯದರ್ಶಿಯವರಿಗೆ ಗಂಭೀರವಾದ ಒಂದು ನಿರ್ದೇಶನ ಕೊಡುತ್ತೇವೆ, ಯಾವುದೇ ಕಾರಣದಿಂದ ಶಿಷ್ಟಾಚಾರದ ಉಲ್ಲಂಘನೆ ಆಗಬಾರದು, ಶಿಷ್ಟಾಚಾರದ ಪ್ರಕಾರ ಯಾರ್ಯಾರು

ಸಭೆಯಲ್ಲಿರಬೇಕೆಂದು ಹೇಳಿದಿರಿ. ಅಂದರೆ ಅಧ್ಯಕ್ಷರು ಶಾಸಕರೇ ಆಗಬೇಕು, ಎರಡು ತಾಲ್ಲೂಕಿನವರು ಇದ್ದರೆ, ತಾಲ್ಲೂಕಿನ ಬಹುಭಾಗ ಯಾರು represent ಮಾಡುತ್ತಾರೆ ಅವರು ಅಧ್ಯಕ್ಷರಾಗಬಹುದು, ಈ ರೀತಿ ಶಿಷ್ಟಾಚಾರವಿದೆ. ಹಾಗಾಗಿ ಅವರನ್ನು ಮಾತ್ರ invitation ನಲ್ಲಿ ಹಾಕಬೇಕು, ಅವರನ್ನು ಮಾತ್ರ ಕಾರ್ಯಕ್ರಮಕ್ಕೆ ಆಹ್ವಾನಿಸಬೇಕೆಂದು ಒಂದು ನಿರ್ದೇಶನವನ್ನು ನಾವು ಕೊಟ್ಟು ಈ ಕೂಡಲೆ ಅದನ್ನು ...

ಶ್ರೀ ಟಿ.ಬಿ. ಜಯಚಂದ್ರ : ಅದರಲ್ಲಿ including Universities programmes, Banks programmes ಅನ್ನು ಸೇರಿಸಬೇಕು.

ಶ್ರೀ ಎಸ್. ಸುರೇಶ್‌ಕುಮಾರ್ : University autonomous body ಆಗುತ್ತದೆ.

ಶ್ರೀ ಸಿದ್ದರಾಮಯ್ಯ : Autonomous body ಆದರೆ ಸರ್ಕಾರದಿಂದ ಅವರಿಗೆ ಹಣ ಕೊಡುವುದಿಲ್ಲವೇ?

ಶ್ರೀ ಎಸ್. ಸುರೇಶ್‌ಕುಮಾರ್ : ಅದನ್ನು ನಾವು ಪರಿಶೀಲಿಸುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ಅವರಿಗೆ ಸಂಬಳ ಕೊಡುವವರು ನಾವೇ ಅಂದರೆ ಸರ್ಕಾರ.

ಶ್ರೀ ಎಸ್. ಸುರೇಶ್‌ಕುಮಾರ್ : Universities ದು ಹೇಳಿದಿರಿ ಹಾಗೆಯೇ Co-operative Banks ನದು ಹೇಳಿದ್ದೀರಿ.

ಶ್ರೀ ಅರವಿಂದ ಲಿಂಬಾವಳಿ : Universities ಬಗ್ಗೆ ಹೇಳುವುದಾದರೆ ಅವುಗಳ ನೀತಿ ಸಂಹಿತೆ ಬೇರೆ ತರಹ ಇದೆ.

ಶ್ರೀ ಟಿ.ಬಿ. ಜಯಚಂದ್ರ : ಆಯಾಯ ಭಾಗಕ್ಕೆ ಸಂಬಂಧಿಸಿದಂಥ ವಿಚಾರಗಳಿಗೆ programme ಮಾಡುವಾಗ ಕರೆಯುವುದಿಲ್ಲವೆಂದರೆ ಏನರ್ಥ?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಜಯಚಂದ್ರರವರೆ, ನಾನೂ ಕೂಡ ತಮ್ಮ ಪರವಾಗಿಯೇ ವಾದ ಮಾಡುವಂಥವನು. ನಾನು ಹೇಳುವುದೇನೆಂದರೆ, ಈಗಿರುವಂಥ ಅಧಿನಿಯಮದ ಪ್ರಕಾರ ಅಲ್ಲಿ Governor ರವರು pro Chancellor ಆಗಿರುವುದರಿಂದ ಅವರು ಆ protocol ಅನ್ನು ಕಳುಹಿಸುತ್ತಿದ್ದಾರೆ. ಹಾಗಾಗಿ

ಅದೇನಾದರೂ ತಿದ್ದುಪಡಿಗಳಾದರೆ ಈಗ ಆಗಿರತಕ್ಕಂಥ ಎಲ್ಲಾ ಶಾಸಕರು, ಜಿಲ್ಲಾ ಮಟ್ಟದ ಕಾರ್ಯಕ್ರಮವಾಗಿದ್ದರಿಂದ ಎನ್. ಸಂಪಂಗಿಯವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಆ ವಿಷಯ ಕೂಡ ಬಂದಿದ್ದು ಅದು ನನ್ನ ಗಮನದಲ್ಲಿ ಕೂಡ ಇದೆ. ಅದನ್ನು ಆವತ್ತು ತಕ್ಷಣವೇ ನಾನು Vice Chancellorಗೆ ಕೇಳಿದೆ. ಆದ್ದರಿಂದ ಈ ರೀತಿ ನಿಯಮಗಳು ಅಲ್ಲಿರುವುದರಿಂದ ಅದಕ್ಕೆ ತಿದ್ದುಪಡಿ ಆಗದೇ ಹೊರತು ಏನೂ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಹಾಗಾದರೆ, ಅದನ್ನು ತಿದ್ದುಪಡಿ ಸಲುವಾಗಿ ಸದನಕ್ಕೆ ತನ್ನಿ. ತಿದ್ದುಪಡಿ ಮಾಡೋಣ.

ಶ್ರೀ ಅರವಿಂದ ಲಿಂಬಾವಳಿ : ಅವಶ್ಯವಾಗಿ.

ಶ್ರೀ ಟಿ.ಬಿ. ಜಯಚಂದ್ರ : ಏಕೆಂದರೆ, democracy ಯಲ್ಲಿ real representative is MLA. not anybody.

ಶ್ರೀ ಅರವಿಂದ ಲಿಂಬಾವಳಿ : University programme ಆದರೂ ಕೂಡ ಅವರು ನಮ್ಮ ಅಧಿಕಾರಿಗಳನ್ನು ಕೇಳುವುದಿಲ್ಲ, ಅಲ್ಲಿ ಜಿಲ್ಲಾಧಿಕಾರಿಗಳನ್ನು ಕೇಳುವುದಿಲ್ಲ, ಅಲ್ಲಿ Governor office ನವರನ್ನು ಕೇಳಿ ಅಲ್ಲಿಯ rules ಪ್ರಕಾರ ಕಳುಹಿಸುತ್ತಾರೆ. ಅದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ಗಂಭೀರವಾಗಿ ತೆಗೆದುಕೊಂಡು ಒಟ್ಟಾಗಿ ಒಂದು circular ಅನ್ನು ಹೊರಡಿಸುತ್ತೇವೆ. ಜೊತೆಗೆ ಕೆಂಪು ದೀಪದ ಬಗ್ಗೆ ಹೇಳಿದಿರಿ. Cabinet ಸಚಿವರು ಉಪಯೋಗಿಸಬೇಕೆಂದು ಹೇಳಿದ್ದೀರಿ. ಕೆಂಪು ದೀಪ ಯಾರ್ಯಾರು ಅಳವಡಿಸಿಕೊಳ್ಳಬಹುದು, ಎನ್ನುವ ಬಗ್ಗೆ BAC ನಲ್ಲಿ ಸಹ ಪ್ರಸ್ತಾಪ ಮಾಡಿದ್ದೀರಿ. ಯಾವುದೇ ಕಾರಣಕ್ಕೂ ಶಿಷ್ಟಾಚಾರ ಉಲ್ಲಂಘನೆ ಆಗದ ಹಾಗೆ ಪಟ್ಟಿಯಲ್ಲಿ ಬರುವವರು ಮಾತ್ರ ಅಂದರೆ ಕೆಂಪು ದೀಪ ಯಾರು ಹಾಕಿಕೊಳ್ಳಬೇಕೋ ಅವರು ಮಾತ್ರ ಹಾಕಬೇಕು. ಆದರೆ, ಕೆಂಪು ದೀಪ ಹಾಕಿಕೊಳ್ಳುವುದು ಈಗೊಂದು fashion ಆಗಿಬಿಟ್ಟಿದೆ. ಕೆಂಪು ದೀಪ ಹಾಕಿಕೊಂಡು Traffic signal ನಲ್ಲಿ ನಿಂತಿರುತ್ತಾರೆ, ಜನರೆಲ್ಲ ಅದನ್ನು

ನೋಡಿ ಮುಸಿ ಮುಸಿ ನಗುತ್ತಾರೆ. ಅಥವಾ ಆ ಜನರು ನೋಡುವ ದೃಷ್ಟಿಯೇ ಬೇರೆ. ಇರಲಿ, ಅದು ಅವರವರ ಭಾವಕ್ಕೆ ಬಿಟ್ಟಿರುವುದು. ಹಾಗಾಗಿ ಕೆಂಪು ದೀಪ ಹಾಕಿಕೊಳ್ಳುವುದರ ಬಗ್ಗೆ ಯಾರ್ಯಾರನ್ನು ಕಾರ್ಯಕ್ರಮಕ್ಕೆ ಕರೆಯಬೇಕೆನ್ನುವುದರ ಬಗ್ಗೆ cabinet status ಬಗ್ಗೆ ನಿರ್ದಿಷ್ಟವಾದ ನಿರ್ದೇಶನವನ್ನು Chief Secretary ಯವರಿಗೆ ಕೊಡುತ್ತೇವೆ.

ಅಧ್ಯಕ್ಷರು : ಆಯಿತು. ಸರ್ಕಾರದಿಂದ ಉತ್ತರ ಬಂದಿದೆ. ಅಶೋಕ್‌ರವರೆ ಕುಳಿತುಕೊಳ್ಳಿ.

ಶ್ರೀ ಪಿ.ಎಂ. ಅಶೋಕ್ : ಆಹ್ವಾನ ಪತ್ರಿಕೆಯಲ್ಲಿ ಅಧ್ಯಕ್ಷತೆ first ಇರಬೇಕೋ, ಮುಖ್ಯ ಅತಿಥಿ ಹೆಸರು first ಇರಬೇಕೋ ಎನ್ನುವ ಬಗ್ಗೆ clarification ಕೊಡಬೇಕೆಂದು ಕಾನೂನು ಮಂತ್ರಿಯವರನ್ನು ಕೇಳಬಯಸುತ್ತೇನೆ.

6. ಅಧ್ಯಕ್ಷರ ತೀರ್ಪು :

ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆಯುವ ಬಗ್ಗೆ.

ಅಧ್ಯಕ್ಷರು : ಮಾನ್ಯ ಸದಸ್ಯರುಗಳಾದ ಪಿ.ಎಂ.ಅಶೋಕ್‌ರವರು, ಎನ್. ಸಂಪಂಗಿಯವರು, ಶಿವಶಂಕರರೆಡ್ಡಿಯವರು ಮಾತನಾಡಿ ಸರ್ಕಾರಿ ಕಾರ್ಯಕ್ರಮಗಳಲ್ಲಿ ಶಿಷ್ಟಾಚಾರದ ಪಾಲನೆಯಾಗದೆ ಎಲ್ಲವೂ ಉಲ್ಲಂಘನೆಯಾಗುತ್ತಿದೆ ಎನ್ನುವುದನ್ನು ಸದನದ ಗಮನಕ್ಕೆ ತಂದಿದ್ದಾರೆ ಮತ್ತು ಸರ್ಕಾರದಿಂದ ಇದಕ್ಕೆ ಉತ್ತರವನ್ನೂ ಸಹ ಕೊಟ್ಟಿದ್ದಾರೆ. ಇದರಲ್ಲಿ ಶಿಷ್ಟಾಚಾರ ಉಲ್ಲಂಘನೆಯಾಗುವಂಥದ್ದನ್ನು ಬಹಳ ಸ್ಪಷ್ಟವಾಗಿ ಅನೇಕ ಸದಸ್ಯರು ಕೂಡ ಹೇಳಿದ್ದಾರೆ. ಇನ್ನು ಮುಂದೆಯಾದರೂ ಸ್ಪಷ್ಟವಾದ ಸೂಚನೆಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಅದರಲ್ಲೂ ವಿಶೇಷವಾಗಿ ಜಿಲ್ಲಾಮಟ್ಟದ ಮತ್ತು ತಾಲ್ಲೂಕು ಮಟ್ಟದ ಎಲ್ಲಾ ಅಧಿಕಾರಿಗಳಿಗೆ ಇದರ ಸೂಚನೆಯನ್ನು ಕೊಡಬೇಕು. ಇದರ ಬಗ್ಗೆ ಈಗೇನು ಮಾಹಿತಿ ಕೊಟ್ಟಿದ್ದಾರೆ ಮತ್ತು ಯಾರು ಅಧಿಕಾರಿಗಳು ಶಿಷ್ಟಾಚಾರ ಉಲ್ಲಂಘನೆ ಮಾಡಿದ್ದಾರೆ ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರವನ್ನು ಬರೆಯಬೇಕು. ಒಂದೆರಡರಲ್ಲಿಯಾದರೂ punishment ಆಗಲೇಬೇಕು.